ತಾಲ್ಲೂಕನ್ನು ಕಡೆಗಾಣಿಸಿದ್ದಾರೆ. ಆದ್ದರಿಂದ ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಹೊಸ ವರ್ಷದ ಬಳುವಳಿಯಾಗಿ ಈ ಖಾಲಿ ಕೊಡವನ್ನು ಅರ್ಪಿಸುತ್ತೇನೆ- ಅಲ್ಲಿಯ ಜನರ ಗೋಳನ್ನು ಕೇಳುವವರೇ ಇಲ್ಲ.

(ಮಾನ್ಯ ವಾಟಾಳ್ ನಾಗರಾಜ್ ಅವರು ಮುಖ್ಯಮಂತ್ರಿಗಳಿಗೆ ಖಾಲಿ ಕೊಡವನ್ನು ಅರ್ಪಿಸಿದರು.)

ಶ್ರೀ ಟಿ.ಎಂ. ಮಂಜುನಾಥ್.—ನನ್ನದೊಂದು ಕ್ರಿಯಾಲೋಪ ಇದೆ. ಯಾರೂ ಈ ಸಭೆಯಲ್ಲಿ, ಯಾವುದೇ ಪದಾರ್ಥವನ್ನು ತರಬಾರದೆಂದು ನಿಯಮ ಇದೆ. ಈಗ ಆ ಸದಸ್ಯರು ಇಲ್ಲಿಗೆ ಖಾಲಿ ಕೊಡವನ್ನು ತಂದಿದ್ದಾರೆ, ಇದು ಸರಿಯಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರದು ಅಗ್ಗದ ಪ್ರಚಾರ, ಇದು ಎಲ್ಲರಿಗೂ ಗೊತ್ತು...

ಶ್ರೀ ಟಿ. ಎಂ. ಮಂಜುನಾಥ್.—ಅಧ್ಯಕ್ಷರೇ, ಈ ತರಹದ ಪ್ರತಿಭಟನೆಗೆ ತಾವು ಅವಕಾಶ ಕೊಡಬಾರದು.....

ಶ್ರೀ ಕೆ.ಎಸ್. ಈಶ್ವರಪ್ಪ.—ರೈತರ ಸಾಲ ವಸೂಲಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ''ಸ್ಟೇ'' ಕೊಟ್ಟಿದ್ದರು. ಆದರೆ ಮತ್ತೆ ಈಗ ಸಾಲ ವಸೂಲಿಗೆ ಆದೇಶ ಕೊಟ್ಟಿದ್ದಾರೆ. ಮಾನ್ಯ ಬಿ. ಎಸ್. ಯಡಿಯೂರಪ್ಪನವರು ರೈತರ ಸಾಲದ ಬಗ್ಗೆ ಹೋರಾಟ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಒಂದು ಸಂತಾಪಸೂಚಕ ನಿರ್ಣಯ ಇದ್ದಕ್ಕೆ ಈ ಸದನದ ಕಾರ್ಯಕಲಾಪಗಳನ್ನು ನಡೆಸತಕ್ಕಂಥ ಬಗ್ಗೆ ಇದಲ್ಲ. ನಮ್ಮ ಮುಂದೆ ಆರ್ಡರ್ ಪೇಪರ್ ಇದೆ. ಏನೇನು ವಿಚಾರಗಳು ಚರ್ಚೆಗೆ ಬರುತ್ತವೆ ಎಂದು ಆ ಆರ್ಡರ್ ಪೇಪರ್‌ನಲ್ಲಿ ನಮೂದಾಗಿದೆ' ಹೀಗೆ ಏಕಾಏಕಿ ಬಂದು ಕೂಡಿಯುವ ನೀರು, ಸಾಲಸೂಟು. ಮತ್ತೊಬ್ಬರು ಇನ್ನೊಂದು ಎಂದರೆ, ಸಭೆಯನ್ನು ಈ ರೀತಿ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ನಾನು ಬಹಳ ವ್ಯಸನದಿಂದ ತಮ್ಮಗಳ ಗಮನವನ್ನು ಇದರ ಬಗ್ಗೆ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.—ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಹೆಚ್. ಕೆಂಪೇಗೌಡರು ದಿನಾಂಕ ೨೨ನೇ ಜನವರಿ ೧೯೯೦ರಂದು ನಿಧನರಾದರೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ. ಶ್ರಯುತರು ೭ನೆಯ ವಿಧಾನಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಶ್ರೀ ಕೆಂಪೇಗೌಡರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯ ಪಾತ್ರವಹಿಸಿ ಶ್ಲಾಘನೀಯವಾದ ಸೇವೆಯನ್ನು ಸಲ್ಲಿಸಿದ್ದರು. ಹಾಗೂ ಗ್ರಾಹಕರ ಆಂದೋಲನದಲ್ಲಿ ಮಂಚೂಣಿಯ ನಾಯಕತ್ವವನ್ನು ವಹಿಸಿದ್ದರು. ಜೊತೆಗೆ ಹಲವಾರು ವಿದ್ಯಾಸಂಸ್ಥೆಗಳ ಅಭಿವೃದ್ಧಿಗಾಗಿ ದುಡಿದು ಗಣನೀಯವಾದ ಸೇವೆ ಸಲ್ಲಿಸಿರುತ್ತಾರೆ. ನಿಧನ ಹೊಂದಿದ ಮಾನ್ಯ ಸದಸ್ಯರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಒಂದು ನಿಮಿಷ ಮೌನವನ್ನು ಆಚರಿಸಲಾಯಿತು)

ಶ್ರೀ ಡಿ ಬಿ. ಚಂದ್ರೇಗೌಡ (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತಾವು ನಿಯಮಾವಳಿಗಳನ್ನು ಉಲ್ಲೇಖ ಮಾಡಿದ್ದೀರಿ. ನಿಯಮಗಳ ವ್ಯಾಪ್ತಿಯೊಳಗೆ ಕೆಲಸ ಮಾಡಬೇಕೆನ್ನುವುದಕ್ಕಂತೂ ನಮ್ಮ ಇಚ್ಛೆ. ಅದಕ್ಕಾಗಿ ಪ್ರಯತ್ನ ಮಾಡಿದ್ದೇವೆ. ಆದರೆ ಇವತ್ತಿನ ಸಭೆಯ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆದು ನಿರ್ಧಿಷ್ಟವಾದ ಇಂತಹ ವಿಚಾರಗಳನ್ನೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯ ಆಗಿಲ್ಲ. ಸದಸ್ಯರು ಕಳಂಹಿಸಿರತಕ್ಕಂಥ ಪ್ರಶ್ನೆಗಳಿಗೇ ಆಗಲಿ ಅಥವಾ ೩೧ನೇ ನಿಯಮದಲ್ಲಿ ಕಳುಹಿಸತಕ್ಕಂಥ ವಿಚಾರವನ್ನಾಗಲೀ, ಇಲ್ಲವೇ ಕಾಲಿಂಗ್ ಅಟೆನ್‌ಷನ್ ನೋಟೀಸ್‌ನ್ನಾಗಲೀ, ಯಾವುದನ್ನೂ ತಮ್ಮ ಕಾರ್ಯಾಲಯ ಅಡ್ಮಿಟ್ ಮಾಡಿಲ್ಲ. ಆದುದರಿಂದ ನಾವು ವಿಧಿ ಇಲ್ಲದೆ ನಿಲುವಳಿ ಸೂಚನೆಯನ್ನು ತರಬೇಕಾದಂಥ ಪ್ರಸಂಗಕ್ಕೆ ಈ ಪರಿಸ್ಥಿತಿಯೇ ಕಾರಣ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊದಲು ಈ ವಿಧೇಯಕ ಮುಗಿಯಲಿ,

ಶ್ರೀ ಡಿ. ಬಿ. ಚಂದ್ರೇಗೌಡ.—ಮೊದಲು ನಿಯಮಾವಳಿಗಳ ಪ್ರಕಾರ ಕೆಲಸ ಮಾಡಬೇಕೆನ್ನುವುದಕ್ಕೆ ನಾವು ಭಾಗಿಗಳು. ಆದರೆ ಯಾವ ನಿಯಮಾವಳಿಗಳಲ್ಲಿ ಕೆಲಸ ಮಾಡಬೇಕು. ನಾವು ಕೊಟ್ಟ ಕೊಚ್ಚನ್

ಆಡ್ಮಿಟ್ ಆಗುವದಿಲ್ಲ.ವಾಪಸ್ ಕಳುಹಿಸುತ್ತಿದ್ದಾರೆ. ಕಾಲಿಂಗ್ ಅಟೆನ್ಷನ್ ನೋಟೀಸ್ ಅಡ್ಮಿಟ್ ಆಗುವುದಿಲ್ಲ. ಆದುದರಿಂದ ನಾವು ಯಾವರೀತಿ ಕೆಲಸ ಮಾಡಬೇಕು. ನಿಯಮಗಳು ಏನು? ನಿಯಮಗಳು ಬರೀ ಪುಸ್ತಕದಲ್ಲಿರಬೇಕೇ ? ನಿಯಮಗಳ ಪಾಲನೆಗೆ ಮಾರ್ಗದರ್ಶನ ಬೇಕಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಮಾಡುವುದಿಲ್ಲ, ಈ ವಿಚಾರದಲ್ಲಿ ತಮ್ಮ ಗಮನ ಸೆಳೆಯುವುದು ಅಷ್ಟೇ ಅಲ್ಲ, ಮಾರ್ಗದರ್ಶನವನ್ನೂ ಸಹ ಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂಥ ಮಾತುಗಳು ಅರ್ಥಪೂರ್ಣವಾಗಿದೆ. ಈ ಅಧಿವೇಶನವನ್ನು ನಿರ್ದಿಷ್ಟವಾದಂಥ, ಸೀಮಿತವಾದಂಥ ಕಾರ್ಯಕಲಾಪಕ್ಕೆ ಒಂದು ದಿವಸದ ಮಟ್ಟಿಗೆ ಕರೆದಿರತಕ್ಕಂಥದ್ದು. ಆದುದರಿಂದ ನಾನು ಈ ಒಂದು ದಿವಸದ ಅಧಿವೇಶನದ ಕಾರ್ಯಕಲಾಪಗಳಿಗೋಸ್ಕರ ಬಿಸಿನೆಸ್ ಅಡ್ವೈಸರಿ ಕಮಿಟಿ ಕರೆಯ ಬೇಕಾದಂಥ ಅಗತ್ಯತೆ ನನಗೆ ತೋರಲಿಲ್ಲವಾದ ಕಾರಣ ನಾನು ಕರೆಯಲಿಲ್ಲ. ಆದರೆ ಮಾನ್ಯ ಸದಸ್ಯರುಗಳು ಕೆಲವು ಜರೂರಾದ ವಿಚಾರಗಳನ್ನು ಇಲ್ಲಿ ಸದನದ ಗಮನಕ್ಕೆ ತರುವುದಕ್ಕೆ ಸೂಚನೆಗಳನ್ನು ಕೊಟ್ಟಿದ್ದಾರೆ. ಸಾರ್ವಜನಿಕ ಮಹತ್ವವನ್ನು ಪಡೆದ ಕೆಲವು ಜರೂರು ವಿಚಾರಗಳ ಬಗ್ಗೆ ತಾವು ಸದನದ ಗಮನವನ್ನು ಸೆಳೆದಿದ್ದೀರಿ. ಆ ಬಗ್ಗೆ ಕೆಲವು ಸೂಚನೆಗಳನ್ನು ಸಹ ಕೊಟ್ಟಿದ್ದೀರಿ. ಅದರ ಬಗ್ಗೆ ನಾನು ಕಾಗದ ಪತ್ರಗಳು ಸಭೆಯ ಮುಂದೆ ಮಂಡಿಸಿದ ಮೇಲೆ ಹೇಳುತ್ತೇನೆ.

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

I. SRI VEERENDRA PATIL (Chief Minister).—I beg to lay on the table of the House.

1 Order No. HD 288 CNA 89 dated 21st November, 1989.

Regarding granting permission to exhibit children films supplied by the Public Relation Officer, Children Film Society. India, Bombay in all the Taluk Head Quarters of Gulbarga District from 1-11-1989 to14-11-1989.

2 Order No. HD 209 CNA 89. dated 6th September, 1989.

Regarding granting permission to exhibit children films supplied by M/s. Jayashree Enterprises, Bangalore in all the theatres all over the State at 8.30 a.m. as morning show.

3 Order No. HD 289 CNA 89 dated 9th November, 1989.

Regarding granting permission to exhibit children films supplied by the Public Relation officer, children Film Society, India, Bombay in Bangalore District from 10.11.1989 to 17-11-1989.

4 Order No. HD 271 CNA 88, dated 14th November, 1988.

Regarding granting permission to exhibit children films supplied by the Manager, Children Film Society, India, Bombay in Dharwad District.

5 22nd Annual Report of Mysore Cosmetics Limited, for the year 1987-88.

as required under Section 619(A)of the Companies Act, 1956–

6 44th Annual Report of the Mysore Lac & Paint Works Limited, Mysore for the year 1986-87.

as required under Section 619(A)of the Companies Act, 1956.